ಶ್ರೀ ಟಿ. ಆರ್. ಶಾಮಣ್ಣ.—ಅವರು ಮಂತ್ರಿಗಳ ಪ್ರಭಾವದಿಂದ ಈ ರೀತಿ ಮುಂದುವರಿಯುತ್ತಿದ್ದಾರೆ. ಕಾರ್ಪೊರೇಷನ್‌ಗೆ ನಿಮ್ಮ ಅಧಿಕಾರಿಗಳು ಡೆಪ್ಯುಟೇಷನ್ ಬರುತ್ತಿರುವುದರಿಂದ ನಮ್ಮ ನಗರಸಭೆಯ ನೌಕರರ ಭವಿಷ್ಯ ಹಾಳಾಗುತ್ತಿದೆ. ಆದ್ದರಿಂದ ಈ ಡೆಪ್ಯುಟೇಷನ್ ಸಿಸ್ಟಂನ್ನು ನಿಲ್ಲಿಸಿ ನಮ್ಮ ನೌಕರರಿಗೆ ತೊಂದರೆ ಆಗದಂತೆ ಮಾಡುತ್ತೀರಾ?

ಶ್ರೀ ಎಂ. ಮಲ್ಲಪ್ಪ.—ಆಗಲಿ ಮಾಡೋಣ.

ಶ್ರೀ ಐ. ಪಿ. ಡಿ. ಸಾಲಪ್ಪ.—ಕಾರ್ಪೊರೇಷನ್‌ಗೆ ಡೆಪ್ಯುಟೇಷನ್ ಕಳುಹಿಸುವುದರಲ್ಲಿ ಹರಿಜನರಿಗೆ ಸರಿಯಾದ ಪ್ರಾತಿನಿಧ್ಯ ಸಿಕ್ಕುತ್ತಿಲ್ಲ. ಇನ್ನು ಮುಂದಾದರೂ ಅವರಿಗೆ ಸರಿಯಾದ ಪ್ರಾತಿನಿಧ್ಯ ಸಿಕ್ಕುವಂತೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಂ. ಮಲ್ಲಪ್ಪ.— ಹರಿಜನರನ್ನು ಕಾರ್ಪೊರೇಷನ್‌ಗೆ ಡೆಪ್ಯುಟೇಷನ್ ಕಳಿಸಬಾರದೆಂದು ನಮ್ಮ ಉದ್ದೇಶವಿಲ್ಲ. ಈ ಡಾಕ್ಟರ್‌ಗಳನ್ನು ನಾವು ರೊಟೇಷನ್ ಮೇಲೆ ಹಾಕುತ್ತಿದ್ದೇವೆ. ಒಂದು ವರ್ಷ ಅವರು ಹಳ್ಳಿಗಳಿಗೆ ಹೋಗಬಹುದು ಇನ್ನೊಂದು ವರ್ಷ ಮುನಿಸಿಪಾಲಿಟಿಗಳಿಗೆ ಹೋಗಬಹುದು, ಮತ್ತೊಂದು ವರ್ಷ ಪಿ. ಹೆಚ್. ಸಿ. ಗೆ ಹೋಗಬಹುದು. ಆದರೆ ನಾವು ಯಾರಿಗೂ ತಾರತಮ್ಯ ಮಾಡುತ್ತಿಲ್ಲ.

ಶ್ರೀ ಐ. ಪಿ. ಡಿ ಸಾಲಪ್ಪ.—ಬೇರೆ ಜಾತಿಯವರನ್ನು ಮುನಿಸಿಪಾಲಿಟಿ, ಕಾರ್ಪೊರೇಷನ್‌ಗಳಿಗೆ ಹಾಕಿ, ಹರಿಜನರನ್ನು ಹಾಕದೇ ಇರುವುದಕ್ಕೆ ಕಾರಣ ಏನು ? ಇವರಿಗೆ ಅರ್ಹತೆ ಇಲ್ಲವೆ ? ಇನ್ನು ಮುಂದಾದರೂ ಹರಿಜನರನ್ನು ಮುನಿಸಿಪಾಲಿಟಿಗಳಿಗೆ ಹಾಕುವಂತೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಂ. ಮಲ್ಲಪ್ಪ.— ತಾವು ಹೇಳುತ್ತಿರುವುದರಲ್ಲಿ ಹುರುಳಿಲ್ಲ. ನಾನು ಮೊದಲೇ ಹೇಳಿದಂತೆ ಈ ವಿಚಾರದಲ್ಲಿ ತಾರತಮ್ಯ ಮಾಡುತ್ತಿಲ್ಲ. ಈ ವರ್ಷದಲ್ಲಿ ಸುಮಾರು ೩೦೦ ಜನ ಡಾಕ್ಟರ್‌ಗಳನ್ನು ಹೊಸದಾಗಿ ನೇಮಕ ಮಾಡಿಕೊಂಡು ಎಲ್ಲ ಕಡೆಗಳಿಗೂ ಹಾಕಿತ್ತಿದ್ದೇವೆ. ತಮ್ಮ ಪ್ರಶ್ನೆ ಊಹೆಗೆ ನಿಲುಕದ್ದು

ಅಧ್ಯಕ್ಷರು.—ಪ್ರಶ್ನೆ ನಂ. ೫೧೮, ೭೨೮ ಹಾಗೂ ೭೯೫ ತಡೆಹಿಡಿಯಲಾಗಿವೆ.

Misappropriation of funds in LSCS Thimmana Hally, C. N. Hally Taluk, Tumkur District.

836 SRI T. B.JAYACHANDRA (Kallambella)—Will the Minister for Co-operation be pleased to state.

(a) whether the Government is aware that there is misappropriation of funds at LSCS., Thimmana Hally, C. N. Hally Taulk, Tumkur District ;

(b) if so, the amount misappropriated and the names of the persons responsible for the said misappropriation ;

(c) the legal action taken against the persons, who have misappropriated funds in the said society ?

SRI V. M.KUSHNOOR (Minister for Co-operation).—

(a) Yes, Sir,

(b) (i) Rs 31,021.00 misappropriated by Sri Lakshmikanthacharya, Ex-salesman. of the society. (ii) Rs. 3212-50 misappropriated by Sri T. Chandrashekariah, Ex-Secretary of the society.

(c)—

(i) criminal case against Sri T. Lakshmikanthacharya filed before the Judicial Magistrate Chikkanayakanahally in C.C. No. 2 of 78 is pending. A Civil dispute filed against Sri T. Lakshmikanthacharya filed by the Society before the Assistant Registrar of Co-operative Societies Tiptur was decreed on 10-3-78 against which an appeal has been preferred before the Karnataka Appellate Tribunal. The appeal is pending.

(ii) A criminal complaint was filed against Sri T. Chandrasekharaiah which is under inestigation before the Sub-Inspector of Police, Chikkanayakanahally under Crime No. 46 of 79. Action is being taken to file the civil dispute under section 70 and 103 of KCS Act against Sri T. Chandrasekharaiah.

ಶ್ರೀ ಟಿ.ಬಿ. ಜಯಚಂದ್ರ .—ಸ್ವಾಮಿ, ಎಲ್.ಎಸ್.ಸಿ.ಎಸ್.ನಲ್ಲಿ ಆಪ್ ಟು ಡೇಟ್ ಆಡಿಟ್ ಆಗಿಲ್ಲ. ಆದನ್ನು ಎಷ್ಟು ದಿವಸದಲ್ಲಿ ಮಾಡಿಸುತ್ತೀರಿ ?

ಶ್ರೀ ವಿ.ಎಂ. ಕುಸನೂರ್.—೧೯೭೭ ಹಾಗೂ ೧೯೭೮ ಈ ೨ ವರ್ಷಗಳ ಲೆಕ್ಕ ಆಡಿಟ್ ಆಗಿಲ್ಲ. ಆದಷ್ಟು ಲಗೂನೆ ಮಾಡಿಸುವುದಕ್ಕೆ ವ್ಯವಸ್ಥೆ ಮಾಡುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ.—ಸ್ವಾಮಿ, ೩೧ ಸಾವಿರ ರೂಪಾಯಿಗಳಿಗೆ ಇಲ್ಲಿ ಡಿಕ್ಕಿ ಮಾಡಿಸಿರುವುದಾಗಿ ಹೇಳಿದ್ದೀರಿ. ಆದರೆ ಅದು ಸತ್ಯಕ್ಕೆ ದೂರವಾದ ವಿಚಾರ. ನನಗೆ ತಿಳಿದಿರುವಂತೆ ಅಲ್ಲಿ ಸುಮಾರು ೬೦ ಸಾವಿರಕ್ಕೂ ಹೆಚ್ಚು ಹಣ ದುರುಪಯೋಗ ಆಗಿದೆ. ಈ ರೀತಿ ದುರುಪಯೋಗ ಮಾಡಿದ ಅಧಿಕಾರಿ ನಿಮ್ಮ ಇಲಾಖೆಯಲ್ಲೇ ಉನ್ನತ ಅಧಿಕಾರಿಯಾಗಿದ್ದಾರೆ. ಅವರ ಅವಧಿಯ ಲೆಕ್ಕಪತ್ರಗಳನ್ನು ತಾವು ಆಡಿಟ್ ಮಾಡಿಸಿ ಎಂದು ನಾನು ತಮಗೆ ಅನೇಕಸಲ ಹೇಳಿದ್ದರೂ ತಾವು ಮಾಡಿಸಲಿಲ್ಲ ತಾವು ಆದಷ್ಟು ಬೇಗ ಆಡಿಟ್ ಮಾಡಿಸಿದರೆ ತಾವು ಇಲ್ಲಿ ಹೇಳಿರುವ ೩೧ ಸಾವಿರ ರೂಪಾಯಿಗೆ ಬದಲು ೬೦ ಸಾವಿರ ರೂಪಾಯಿಗಳ ದುರುಪಯೋಗ ಆಗಿರುವ ವಿಚಾರ ಹೊರಗೆ ಬರುತ್ತದೆ.

SRI V.M. KUSHNOOR.—The Society has filed a case with the police. There is misappropriation of Rs 30,000 and the shortage of goods. After getting the audit report, we will file the case for the recovery of the amount. I may assure the Hon Member that audit would be got done as early as possible.

SRI T.B. JAYACHANDRA.—Can you order for holding a test audit of the accounts ?

SRI V.M. KUSHNOOR.—I shall see that the test audit is also done after the receipt of the regular audit report.

ಶ್ರೀ ಟಿ.ಬಿ. ಜಯಚಂದ್ರ.—ಎಷ್ಟು ದಿವಸದಲ್ಲಿ ಇದರ ಆಡಿಟ್ ಮಾಡಿಸುತ್ತೀರಿ ?

SRI V.M. KUSHNOOR.— As early as possible.

ಶ್ರೀ ಟಿ.ಬಿ. ಜಯಚಂದ್ರ.—ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರ ಮುಂದೆ ಈ ಕೇಸು ತೀರ್ಮಾನ ಆದ ಮೇಲೆ ಈಗ ಟ್ರಿಬ್ಯುನಲ್‌ಗೆ ಬಂದಿದೆ. ಇಲ್ಲಿಗೆ ಬಂದು ೩ ವರ್ಷಗಳಾದರೂ ಇನ್ನೂ ತೀರ್ಮಾನ ವಾಗಿಲ್ಲ. ಇಂಥ ಪ್ರಕರಣಗಳನ್ನು ತೀರ್ಮಾನ ಮಾಡದಿದ್ದರೆ ಯಾವ ಸೊಸೈಟಿಗಳೂ ಉದ್ಧಾರ ವಾಗುವುದಿಲ್ಲ.

SRI V.M. KUSHNOOR.—The Tribunal is not under my jurisdiction. I cannot ask the Tribunal to decide the case early as it has to give a judicial decision.

ಅಧ್ಯಕ್ಷರು.—ಪ್ರಶ್ನೆ ನಂ. ೯೫೯ ಹಾಗೂ ನಂ. ೧೦೯೨ ತಡೆ ಹಿಡಿಯಲಾಗಿದೆ.

Left over cultivable Lands in Sharavathi project Area

241 SRI L. T. THIMMAPPA HEGDE (Sagara)—Will the Minister of State for Information and Youth Services be pleased to state.—

(a) whether it has come to the notice of the Government that the some of the lands acquired for Sharavathi project are still cultivable ;

(b) whether Government is aware that there is competition between the people for cultivating these lands which has lead to quarrels ;

(c) whether the Government intend to release such lands for cultivations if they are not necessary for the project ;

(d) the total extent of such lands ?

SRI K.H. SRINIVAS (Minister of State for Information and Youth Services)—

(a) Yes.

(b) No.

(c) Such lands are not proposed to be given out for cultivation, as they will result in excessive silting of the Reservoir.

(d) About 9.02 acres.

ಶ್ರೀ ಎಲ್.ಟಿ. ತಿಮ್ಮಪ್ಪ ಹೆಗ್ಡೆ.—ಸ್ವಾಮಿ, ನನ್ನ (೧) ಪ್ರಶ್ನೆಗೆ ಉತ್ತರವಾಗಿ ತಾವು ''ಜಲಾಶಯದಲ್ಲಿ ಹೆಚ್ಚಾಗಿ ಹೂಳು ತುಂಬಿಕೊಳ್ಳುವುದರಿಂದಾಗಿ ಅಂಥ ಜಮೀನುಗಳನ್ನು ಸಾಗುವಳಿಗೆ ಬಿಟ್ಟುಕೊಡಲು ಉದ್ದೇಶಿಸಿರುವುದಿಲ್ಲ'' ಎಂದು ಹೇಳಿದ್ದೀರಿ. ತಾವು ಕೆಲವರಿಂದ ಕಂದಾಯವನ್ನು ಕಟ್ಟಿಸಿಕೊಂಡು ಸಾಗುವಳಿಗೆ ನೀರನ್ನು ಕೊಡುತ್ತಿರಲಿಲ್ಲವೆ ? ಕೆಲವರು ಅಲ್ಲಿನ ತಹಸೀಲ್ದಾರರನ್ನು ಹೆದರಿಸಿ ಸಾಗುವಳಿ ಮಾಡಿಕೊಂಡು ಈ ವಿಷಯವನ್ನು ಟ್ರಿಬ್ಯುನಲ್‌ಗೆ ಹಾಕಿರುವುದು ತಮ್ಮ ಗಮನಕ್ಕೆ ಬಂದಿದೆಯೆ ?

ಶ್ರೀ ಕೆ.ಹೆಚ್. ಶ್ರೀನಿವಾಸ್.—ಈ ಯೋಜನೆಯನ್ನು ಕಾರ್ಯಗತ ಮಾಡುವ ಕಾಲದಲ್ಲಿ ಆ ಯೋಜನೆಯ ಕೆಳಗಡೆ ಬರತಕ್ಕ ಸಾಗುವಳಿಗೆ ಯೋಗ್ಯವಾದ ಜಮೀನುಗಳನ್ನು ನಾವು ಸ್ವಾಧೀನ ಪಡಿಸಿಕೊಂಡು ಅವರಿಗೆ ಪರಿಹಾರವನ್ನೂ ಕೊಟ್ಟಿದ್ದೇವೆ. ತಾವು ಹೇಳಿದಂತೆ ಕೆಲವು ಭೂ ಮಾಲೀಕರು ಕಂದಾಯ ಕಟ್ಟಿಕೊಂಡು ಸಾಗುವಳಿ ಮಾಡುತ್ತಿದ್ದರು. ಈಗ ಜಲಾಶಯದಲ್ಲಿ ಹೂಳು ತುಂಬಿಕೊಂಡರೆ ಮುಂದೆ ರಿಸರ್ವಾಯರ್‌ಗೆ ಅಪಾಯವೆಂದು ಈ ರೀತಿ ಮಾಡಿದ್ದೇವೆ. ಆದರೆ ಕೆಲವರು ಅಲ್ಲಿನ ಅಧಿಕಾರಿಗಳನ್ನು ಹೆದರಿಸಿಕೊಂಡು ಜಮೀನು ಸಾಗುವಳಿ ಮಾಡುತ್ತಿರುವುದು ನಮ್ಮ ಗಮನಕ್ಕೆ ಬಂದಿಲ್ಲ. ನಾನು ಅಲ್ಲಿಂದಲೇ ಬರುತ್ತಿರುವುದರಿಂದ ಈ ವಿಚಾರ ನನಗೆ ಗೊತ್ತು.